# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-133/2024

C.W.:-1

P.W.:-1

ಸಾಕ್ಷಿಗೆ ಈ ದಿನ ದಿಃ 06-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಬಿ ಕೆ ವಕೀಲರಿಂದಃ**

1) ಆಸ್ಪತ್ರೆಗೆ ನಾನು ಒಬ್ಬಳೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಸಂಜೆ 4.30 ದಿಂದ 5.00 ಗಂಟೆ ವರೆಗೆ ಇದ್ದೆ. ಜಮೀನಿನ ಮಾಲಿಕರಾದ ಮಹಾವೀರ, ಶೀತಲ್ ಮತ್ತು ಸುದರ್ಶನ ತಂದೆ ಕುಬೇರ ಪಟ್ಟಣಕೂಡಿ ಇವರ ಮದ್ಯೆ ಮತ್ತು ಆರೋಪಿಗಳ ಮದ್ಯೆ ಸರ್ವೆ ನಂಬರ 367 ಜಮೀನು ಕುರಿತು ವ್ಯಜ್ಯಗಳು ಚಾಲತಿಯಲ್ಲಿ ಇರುತ್ತವೆ ಎಂದರೆ ಸರಿ.

2) ಸದರಿ ಜಮೀನಿನಲ್ಲಿ ಪೂಡಿ ಆಗಿ ಸರ್ವೆ ನಂಬರ 367/39 ಆರೋಪಿತರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಾನು ಕೆಲಸ ಮಾಡುತ್ತಿದ್ದ ಜಮೀನಿನ ಬೇರೆ ಹಿಸ್ಸಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ಸಂಬಂಧಿಸಿದಂತೆ 15 ಗುಂಟೆ ಜಮೀನವನ್ನು ಶಿವಯೋಗಿ ಮಠಕ್ಕೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಾನು ಕೆಲಸ ಮಾಡುತ್ತಿದ್ದ ಜಮೀನಿನಲ್ಲಿ 38 ಗುಂಟೆ ಆರೋಪಿತರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಮೊದಲಿನಿಂದಲೂ ಅಷ್ಟೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಪೂಡಿ ಎಸ್ ಆರ್ 143/2022-23 ರಂತೆ ನಾನು ಕೆಲಸ ಮಾಡುತ್ತಿದ್ದ ಜಮೀನಿನ ಮಾಲಿಕರು ಬೆಳಗಾವಿಯ ತಾಂತ್ರಿಕ ಸಹಾಯಕ ಹಾಗೂ ಪದ ನಿಮಿತ್ಯ ಭೂ ದಾಖಲೆಗಳ ಉಪ ನಿರ್ದೇಶಕರು, ಬೆಳಗಾವಿ ಇವರ ಮುಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯು ದಿಃ25.06.2024 ರಂದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ಪ್ರಾದೇಶಿಕ ಭೂ ದಾಖಲೆಗಳ ನಿರ್ದೇಶಕರು ಬೆಳಗಾವಿ ಇವರ ಮುಂದೆ ಅಪೀಲ ನಂಬರ 38/2025 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ಇನ್ನೊಮ್ಮೆ ಪೂಡಿ ಮಾಡಲು ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3) ಸದರಿ ಆದೇಶದ ಮೇರೆಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಚಿಕ್ಕೋಡಿ ಇವರು ಸದರಿ ಜಮೀನಿನಲ್ಲಿ ಅಳತೆ ಮಾಡಲು ಹೋದಾಗ ಮಹಾವೀರ ಪಟ್ಟಣಕೂಡಿಯವರು ತಕರಾರು ಮಾಡಿದ್ದರಿಂದ ಅಳತೆ ಮಾಡದೆ ಮರಳಿ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ವ್ಯಜ್ಯಗಳಲ್ಲಿ ಆರೋಪಿತರಿಗೆ ಒತ್ತಾಯ ಮಾಡಿ ಕಬೂಲ ಮಾಡಿಸಲು ಮಹಾವೀರ ಪಟ್ಟಣಕೂಡಿ ಇವರು ನನ್ನ ಕಡೆಯಿಂದ ಸುಳ್ಳು ಫಿರ್ಯಾದಿಯನ್ನು ನೀಡಲು ಹೇಳಿದ್ದರಿಂದ ನಿಪಿ 1 ರಂತೆ ಸುಳ್ಳು ಫಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

4) ನಾನು ನಡೆಸುತ್ತಿದ್ದ ಟ್ರ್ಯಾಕ್ಟರ ನಂಬರ ಹೇಳಲು ಬರುವುದಿಲ್ಲ. ನಾನು ಟ್ರ್ಯಾಕ್ಟರ ನಡೆಸಲು ಪರವಾಣಿಗೆ ಹೊಂದಿರುತ್ತೇನೆ. ಪೊಲೀಸರು ಅದನ್ನು ಪಡೆದುಕೊಂಡಿರುವ ಬಗ್ಗೆ ನೆನಪಿರುವುದಿಲ್ಲ. ನಾನು ಟ್ರ್ಯಾಕ್ಟರನಿಂದ ಗಳೆ ಹೊಡೆದಿರುವ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರನಿಂದ ಎಷ್ಟು ಸಾಲು ಗಳೆ ಹೊಡೆದಿರುತ್ತೇನೆ ಎಂದು ನನ್ನ ಫಿರ್ಯಾದಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ.

5) ನಾನು ಮತ್ತು ಚಾಸಾ 6 ಅದೇ ದಿನ ಪೊಲೀಸ ಠಾಣೆಗೆ ಹೋಗಿ ಫಿರ್ಯಾದಿಯನ್ನು ನೀಡಿರುತ್ತೇವೆ. ನಿಪಿ1 ಚಾಸಾ 6 ರವರು ಬರೆದಿರುತ್ತಾರೆ ಮತ್ತು ಅವರು ನನಗೆ ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೇನೆ ಎಂದರೆ ಸರಿ. ಆರೋಪಿತರು ನನಗೆ ಯಾವುದೇ ರೀತಿ ಹೊಡಿ ಬಡಿ ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಆರೋಪಿ ನನಗೆ ಹೊಡೆದಿರುತ್ತಾರೆ ಮತ್ತು ಯಾರು ಬೈದಿರುತ್ತಾರೆ ಎನ್ನುವ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಮುದ್ದೆ ಮಾಲು 1 ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮುದ್ದೆ ಮಾಲು 1 ನನ್ನ ಸಮಕ್ಷಮ ಜಪ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ ಠಾಣೆಗೆ ಎಷ್ಟು ಸಲ ಹೋಗಿರುತ್ತೇನೆ ಎನ್ನುವುದು ನೆನಪಿಲ್ಲ. ನಿಪಿ 1 ಹೊರತು ಪಡಿಸಿ ಬೇರೆ ಯಾವ ದಾಖಲೆಯ ಮೇಲೆ ಸಹಿ ಮಾಡಿರುತ್ತೇನೆ ಎನ್ನುವುದು ನೆನಪಿಲ್ಲ. ನಿಪಿ 3 ಛಾಯಾ ಚಿತ್ರವನ್ನು ಸದಲಗಾ ಪೊಲೀಸ ಠಾಣೆಯ ಹತ್ತಿರ ರಸ್ತೆಯ ಮೇಲೆ ನಿಂತು ತಗೆದಿದ್ದು ಇರುತ್ತದೆ ಎಂದರೆ ಸರಿಯಲ್ಲ.

6) ಆರೋಪಿತರು ಯಾವುದೇ ಕೃತ್ಯ ಎಸಗಿರುವುದಿಲ್ಲ ಆದರೂ ಸಹ ಅವರ ವಿರುದ್ದ ಸುಳ್ಳು ಫಿರ್ಯಾದಿಯನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-133/2024

C.W.:-4

P.W.:-2

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಶೈಲ ಪಾಟೀಲ |
| ತಂದೆಯ ಹೆಸರು | ಮಲಗೌಡಾ |
| ವಯಸ್ಸು | 40 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ಕಲ್ಲೋಳ್ಳ |

ಸಾಕ್ಷಿಗೆ ಈ ದಿನ ದಿಃ 06-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾ.ಸಾ. 1 ,5 ಮತ್ತು 6 ನನಗೆ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿರುವುದಿಲ್ಲ ಹಾಗೂ ಯಾವುದೇ ರೀತಿ ಹೊಡಿ ಬಡಿ ಮಾಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರಿಗೆ ನಾನು ಈ ಹಿಂದೆ ನೋಡಿರುವುದಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ17-01-2023 ರಂದು ಬೆಳಗ್ಗೆ 11.00 ಗಂಟೆಗೆ ನಾನು ಹಾಗೂ ಚಾಸಾ 1 ಮತ್ತು 5 ರವರು ಕೂಡಿಕೊಂಡು ಮಹಾವೀರ ಪಟ್ಟಣಕೂಡಿ ಇವರ ಜಮೀನಕ್ಕೆ ಕೆಲಸಕ್ಕೆ ಗಳೆ ಹೊಡೆಯುವ ಸಲುವಾಗಿ ಹೋಗಿದ್ದಾಗ ಆರೋಪಿತರು ಎಲ್ಲರೂ ಚಾಸಾ 1 ರವರು

ನಡೆಸುತ್ತಿದ್ದ ಟ್ರ್ಯಾಕ್ಟರ ಹತ್ತಿರ ಬಂದು ನಮ್ಮ ಜಮೀನಿನಲ್ಲಿ ಏಕೆ ಗಳೆ ಹೊಡೆಯುತ್ತಿ, ನೀ ಯಾವಕ್ಕಿ ಅಂತಾ ಅಂದರು, ಆಗ ಚಾಸಾ 1 ರವರು ನಾನು 2000 ಇಸವಿಯಿಂದ ಸದರಿ ಜಮೀನಿನಲ್ಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ಎಲ್ಲರೂ ಕೂಡಿ ನೀ ಯಾವಕ್ಕಿ ಬೋಸಡಿ ಎಂದು ಈ ಜಮೀನು ನಮ್ಮದ್ದು ಐತಿ ಎಂದು ಅವಾಚ್ಯ ಬೈದು ಅದರಲ್ಲಿ 4 ನೇ ಆರೋಪಿತಳು ಕಲ್ಲಿನಿಂದ ಚಾಸಾ 1 ರವರ ಬಲಗೈ ರಟ್ಟೆಗೆ ಒದ್ದಿರುತ್ತಾಳೆ ಎಂದರೆ ಸರಿಯಲ್ಲ. ಆಗ 1 ರಿಂದ 3 ನೇ ಆರೋಪಿತರು ಚಾಸಾ 1 ರವರಿಗೆ ಎಳದಾಡಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ 5 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ಸಮಯ 11.30 ಗಂಟೆ ಆಗಿರುತ್ತದೆ ನಂತರ ಆರೋಪಿತರು ಎಲ್ಲರೂ ಇನ್ನೊಮ್ಮೆ ಜಮೀನಕ್ಕೆ ಬಂದರೆ ನಿನಗೆ ಕೊಂದು ಬಿಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರು ಯಕ್ಸಂಬಾ ಪಟ್ಟಣದ ಸರಕಾರಿ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದುಕೊಂಡು ಈ ಕುರಿತು ಫಿರ್ಯಾದಿ ನೀಡಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ದಿಃ18.01.2023 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ "ಹೀಗಿರುವಾಗ ದಿಃ17.01.2023.......... ಕೇಳಿ ಗೊತ್ತಾಗಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ 4 ಎಂದು ಗುರುತಿಸಲಾಯಿತು. ನಿಪಿ 1 ರಂತೆ ಘಟನೆ ನಡೆದಿದ್ದರೂ ಸಹ ನಾನು ಹಾಗೂ ಆರೋಪಿತರು ಹೊಂದಾಣಿಕೆ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ರಿಂದ ಹೊಡೆದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಬಿ ಕೆ ವಕೀಲರಿಂದಃ**

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

CC No.:-133/2024

C.W.:-5

P.W.:-3

| | |
|---|---|
| ಸಾಕ್ಷಿದಾರನ ಹೆಸರು | ವಿಷ್ಣು ದೊಡಮನಿ |
| ತಂದೆಯ ಹೆಸರು | ವಸಂತ |
| ವಯಸ್ಸು | 50 ವರ್ಷ |
| ಕೆಲಸ | ಕೂಲಿ |
| ವಾಸ | ಕಲ್ಲೋಳ್ಳ |

ಸಾಕ್ಷಿಗೆ ಈ ದಿನ ದಿಃ 06-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾ.ಸಾ. 1 ,4 ಮತ್ತು 6 ನನಗೆ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿರುವುದಿಲ್ಲ ಹಾಗೂ ಯಾವುದೇ ರೀತಿ ಹೊಡಿ ಬಡಿ ಮಾಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರಿಗೆ ನಾನು ಈ ಹಿಂದೆ ನೋಡಿರುವುದಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ17-01-2023 ರಂದು ಬೆಳಗ್ಗೆ 11.00 ಗಂಟೆಗೆ ನಾನು ಹಾಗೂ ಚಾಸಾ 1 ಮತ್ತು 4 ರವರು ಕೂಡಿಕೊಂಡು ಮಹಾವೀರ ಪಟ್ಟಣಕೂಡಿ ಇವರ ಜಮೀನಕ್ಕೆ ಕೆಲಸಕ್ಕೆ ಗಳೆ ಹೊಡೆಯುವ ಸಲುವಾಗಿ ಹೋಗಿದ್ದಾಗ ಆರೋಪಿತರು ಎಲ್ಲರೂ ಚಾಸಾ 1 ರವರು ನಡೆಸುತ್ತಿದ್ದ ಟ್ರಾಕ್ಟರ ಹತ್ತಿರ ಬಂದು ನಮ್ಮ ಜಮೀನಿನಲ್ಲಿ ಏಕೆ ಗಳೆ ಹೊಡೆಯುತ್ತಿ, ನೀ

ಯಾವಕ್ಕಿ ಅಂತಾ ಅಂದರು, ಆಗ ಚಾಸಾ 1 ರವರು ನಾನು 2000 ಇಸವಿಯಿಂದ ಸದರಿ ಜಮೀನಿನಲ್ಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ಎಲ್ಲರೂ ಕೂಡಿ ನೀ ಯಾವಕ್ಕಿ ಬೋಸಡಿ ಎಂದು ಈ ಜಮೀನು ನಮ್ಮದ್ದು ಐತಿ ಎಂದು ಅವಾಚ್ಯ ಬೈದು ಅದರಲ್ಲಿ 4 ನೇ ಆರೋಪಿತಳು ಕಲ್ಲಿನಿಂದ ಚಾಸಾ 1 ರವರ ಬಲಗೈ ರಟ್ಟಿಗೆ ಒದ್ದಿರುತ್ತಾಳೆ ಎಂದರೆ ಸರಿಯಲ್ಲ. ಆಗ 1 ರಿಂದ 3 ನೇ ಆರೋಪಿತರು ಚಾಸಾ 1 ರವರಿಗೆ ಎಳದಾಡಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ 4 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ ಸಮಯ 11.30 ಗಂಟೆ ಆಗಿರುತ್ತದೆ ನಂತರ ಆರೋಪಿತರು ಎಲ್ಲರೂ ಇನ್ನೊಮ್ಮೆ ಜಮೀನಕ್ಕೆ ಬಂದರೆ ನಿನಗೆ ಕೊಂದು ಬಿಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರು ಯಕ್ಸಂಬಾ ಪಟ್ಟಣದ ಸರಕಾರಿ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದುಕೊಂಡು ಈ ಕುರಿತು ಫಿರ್ಯಾದಿ ನೀಡಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ದಿಃ18.01.2023 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ "ಹೀಗಿರುವಾಗ ದಿಃ17.01.2023.......... ಕೇಳಿ ಗೊತ್ತಾಗಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ 5 ಎಂದು ಗುರುತಿಸಲಾಯಿತು. ನಿಪಿ 1 ರಂತೆ ಘಟನೆ ನಡೆದಿದ್ದರೂ ಸಹ ನಾನು ಹಾಗೂ ಆರೋಪಿತರು ಹೊಂದಾಣಿಕೆ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ರಿಂದ ಹೊಡೆದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಬಿ ಕೆ ವಕೀಲರಿಂದಃ**

ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ